ಈ ಮೇಲಿನ ಕೆಲಸಗಳಿಗೆ ಲೋಕೋಪಯೋಗಿ ಇಲಾಖೆಯಿಂದ ಒಟ್ಟು ಅಂದಾಜು ವೆಚ್ಚದ ಪಟ್ಟಿ ಹಾಗೂ ನೀಲಿ ನಕ್ಷೆ ಬರಬೇಕಾಗಿದೆ.

ಆ) ನೀಲಿ ನಕ್ಷೆ ಹಾಗೂ ಅಂದಾಜು ಪಟ್ಟಿ ಲೋಕೋಪಯೋಗಿ ಇಲಾಖೆಯಿಂದ ಸ್ವೀಕರಿಸುವ ಹಂತದಲ್ಲಿದೆ.

ಇ) ಲೋಕೋಪಯೋಗಿ ಇಲಾಖೆಯಿಂದ ನೀಲಿ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಜಿಲ್ಲಾ ಕ್ರೀಡಾಂಗಣ ಸಮಿತಿಯು ಸ್ವೀಕರಿಸಿ ಕಾಮಗಾರಿಯನ್ನು ಪ್ರಾರಂಭಿಸಲು ತೀರ್ಮಾನ ಕೈಗೊಂಡು ಆಡಳಿತಾತ್ಮಕ ಮಂಜೂರಾತಿ ದೊರಕಿದ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು.

859(1251) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು–ಮೈಸೂರು ಚತುಷ್ಪಥ ರಸ್ತೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಈ ಕಾಮಗಾರಿಯನ್ನು ಪೂರೈಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಪೂರೈಸಲಾಗುವುದು ಹಾಗೂ ಇದುವರೆಗಿಗೂ ಎಷ್ಟು ಕಿ.ಮೀ. ಕಾಮಗಾರಿಯನ್ನು ಪೂರಯಸಲಾಗಿದೆ (ವಿವರಗಳನ್ನು ನೀಡುವುದು);

ಈ) ಮಂಡ್ಯ ನಗರದ ಹೃದಯ ಭಾಗದಲ್ಲಿ ಹಾದುಹೋಗುವ ಈ ರಸ್ತೆಗೆ ಹೊಸದಾಗಿ ಕಾಮಗಾರಿಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;

ಊ) ಈ ಕಾಮಗಾರಿಯನ್ನು ಪೂರೈಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸುವುದೇ;

ಋ) ಹಾಗಿದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪೂರೈಸಲಾಗುವುದು;

ಎ) ಮಂಡ್ಯ ನಗರದ ಹೃದಯ ಭಾಗದಲ್ಲಿ ಹಾದು ಹೋಗುವ ರಸ್ತೆಯ ಅಕ್ಕಪಕ್ಕದಲ್ಲಿರುವ ಕಟ್ಟಡಗಳನ್ನು ತೆರವುಗೊಳಿಸಲಾಗುವುದೆ;

ಏ) ಹಾಗಿದ್ದಲ್ಲಿ ಅವರುಗಳಿಗೆ ಸರ್ಕಾರ ಪರಿಹಾರ ನೀಡುವುದೆ (ವಿವರಗಳನ್ನು ನೀಡುವುದು)?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೆಂಗಳೂರು–ಮೈಸೂರು ಚತುಷ್ಪಥ ರಸ್ತೆಯ ಬೆಂಗಳೂರಿನಿಂದ–ಮದ್ದೂರುವರೆಗಿನ ಪ್ಯಾಕೇಜ್‌ನ ಕಾಮಗಾರಿಗಳನ್ನು 22–4–2004 ರಂದು ಮತ್ತು ಮದ್ದೂರಿನಿಂದ ಮೈಸೂರುವರೆಗಿನ ಪ್ಯಾಕೇಜ್‌ನ ಕಾಮಗಾರಿಗಳನ್ನು 6–5–2004 ರಂದು ಪ್ರಾರಂಭಿಸಲಾಗಿದೆ.

ಆ) ಈ ಕಾಮಗಾರಿಗಳನ್ನು ಪೂರೈಸಲು ಪ್ರತಿ ಪ್ಯಾಕೇಜ್‌ಗೆ ಪ್ರಾರಂಭವಾದ ದಿನದಿಂದ 24 ತಿಂಗಳುಗಳ ಕಾಲ ಮಿತಿಯನ್ನು ವಿಧಿಸಲಾಗಿದೆ.

ಇ) ಬೆಂಗಳೂರಿನಿಂದ ಮದ್ದೂರುವರೆಗಿನ ಪ್ಯಾಕೇಜ್‌ನ ಕಾಮಗಾರಿಗಳನ್ನು 21–4–2006ರ ಒಳಗಾಗಿ ಮತ್ತು ಮದ್ದೂರಿನಿಂದ–ಮೈಸೂರುವರೆಗಿನ ಪ್ಯಾಕೇಜ್‌ನ ಕಾಮಗಾರಿಗಳನ್ನು 5–5–2006ರ ಒಳಗಾಗಿ ಪೂರೈಸಲಾಗುವುದು. ಇಲ್ಲಿಯವರೆಗೆ ವಿವಿಧ ಹಂತಗಳ ಕಾಮಗಾರಿಗಳ ವಿವರ ಕೆಳಗಿನಂತಿವೆ.

ಬೆಂಗಳೂರಿನಿಂದ ಮದ್ದೂರುವರೆಗಿನ ಪ್ಯಾಕೇಜ್

| ಕಾಮಗಾರಿಗಳ ವಿವರ | ಒಟ್ಟು ಉದ್ದ ಕಿ.ಮೀ.ಗಳಲ್ಲಿ | ಇಲ್ಲಿಯವರೆಗಿನ ಪ್ರಗತಿ ಕಿ.ಮೀ.ಗಳಲ್ಲಿ | |
|---|---|---|---|
| | | ಎಡಭಾಗ | ಬಲಭಾಗ |
| 1) ರಸ್ತೆಯ ಅಗೆತ | 62.50 | 32.00 | 26.00 |
| 2) ಸಬ್ ಗ್ರೇಡ್ | 62.60 | 25.00 | 19.00 |
| 3) ಜಿ.ಎಸ್.ಬಿ. | 62.60 | 24.00 | 17.00 |
| 4) ಡಬ್ಲ್ಯೂ.ಎಂ.ಎಂ. | 62.60 | 26.00 | 14.00 |
| 5) ಬಿ.ಎಂ. | 62.60 | 15.00 | 6.00 |

ಮದ್ದೂರಿನಿಂದ ಮೈಸೂರುವರೆಗಿನ ಪ್ಯಾಕೇಜ್

| | | | |
|---|---|---|---|
| 1) ರಸ್ತೆಯ ಅಗೆತ | 49.00 | 32.12 | 3.06 |
| 2) ಜಿ.ಎಸ್.ಬಿ. | 49.00 | 28.22 | 1.56 |
| 3) ಡಬ್ಲ್ಯೂ.ಎಂ.ಎಂ. | 49.00 | 22.56 | 1.55 |
| 4) ಬಿ.ಎಂ. | 49.00 | 20.84 | 1.55 |
| 5) ಡಿ.ಬಿ.ಎಂ. | 49.00 | 19.62 | 1.55 |

ಈ) ಮಂಡ್ಯ ನಗರದ ಹೃದಯ ಭಾಗದಲ್ಲಿ ಹಾದು ಹೋಗುವ ರಸ್ತೆಯ ಭಾಗವು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ತೆಗೆದುಕೊಂಡ ಚತುಷ್ಪಥ ರಸ್ತೆಯ ಈಗಿನ ವ್ಯಾಪ್ತಿಯಲ್ಲಿ ಸೇರಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಉದ್ಭವಿಸುವುದಿಲ್ಲ.

ಎ) ಉದ್ಭವಿಸುವುದಿಲ್ಲ.

ಏ) ಉದ್ಭವಿಸುವುದಿಲ್ಲ.

860(995) ಶ್ರೀ ಶ್ರೀರಾಮರೆಡ್ಡಿ ಜಿ. ವಿ. (ಬಾಗೇಪಲ್ಲಿ): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾಗೇಪಲ್ಲಿ ತಾಲ್ಲೂಕಿನ ಐತಿಹಾಸಿಕ ಸ್ಥಳ ಗುಮ್ಮನಾಯಕನಪಾಳ್ಯವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ:

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಡಿ. ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) ಗುಮ್ಮನಾಯಕನಪಾಳ್ಯವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.